**(ಇಂದು ದಿಃ 06.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

ಮುಂದುವರೆದ ಮುಖ್ಯ ವಿಚಾರಣೆ ಃ- ಶ್ರೀ ಎಸ್.ಕೆ.ಬಿ. ವಕೀಲರಿಂದ 8 ಮತ್ತು 9ನೇ ಪ್ರತಿವಾದಿ ಪರ ಃ-

1. ನಾನು ಇಂದು ನ್ಯಾಯಾಲಯಕ್ಕೆ ಆರು ಕಬ್ಬಿನ ತುಕದ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-131 ರಿಂದ ನಿಪಿ-137 ಎಂದು ಗುರುತಿಸಲಾಯಿತು.
2. ಅದೇ ರೀತಿ ಆರು ಛಾಯಾಚಿತ್ರಗಳನ್ನು ಮತ್ತು ಒಂದು ಸಿಡಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮಾಗಿ ನಿಪಿ-138 ರಿಂದ ನಿಪಿ-144 ಎಂದು ಗುರುತಿಸಲಾಯಿತು.
3. ಕಲಂ. 65 ಭಾ.ಸ.ಅ.ರಿತ್ಯ ಪ್ರಮಾಣ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-145 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ವಜಾ ಮಾಡಲು ವಿನಂತಿ.

ಪಾಟೀ ಸವಾಲು ಃ- ಶ್ರೀ ಬಿ.ಡಿ.ಕೆ. ವಕೀಲರಿಂದ ವಾದಿ ಪರ ಃ-

ನಿಪಿ-131 ರಿಂದ ನಿಪಿ-137ರ ಮೇಲೆ ಜಮೀನಿನ ಸರ್ವೆ ನಂಬರ ಮುದ್ರಿತವಾಗಿಲ್ಲ ಎಂದರೆ ಸರಿ. ನಿಪಿ-138 ರಿಂದ ನಿಪಿ-144ರಲ್ಲಿ ಅಕ್ಕ-ಪಕ್ಕದ ಜಮೀನುಗಳು ಕಾಣುವುದಿಲ್ಲ ಎಂದರೆ ಸಾಕ್ಷಿಯು ಜಿಪಿಎಸ್ ಅಳವಡಿಸಿ ಛಾಯಾಚಿತ್ರಗಳನ್ನು ತೆಗೆಯಲಾಗಿದೆ ಎಂದು ನುಡಿಯುತ್ತಾರೆ. ನಿಡಿ-5 ಮತ್ತು ನಿಡಿ-130ಕ್ಕೆ ವಾದಿಗಳ ಸಹಿ ಇಲ್ಲ ಎಂದರೆ ಸರಿ. ನಿಡಿ-5 ಮತ್ತು ನಿಡಿ-130ಕ್ಕೆ ಮಾರಾಟಗಾರರಾಗಿ ಮೌಲಾಸಾಬ ರವರು ಸಹಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು, ಸಾಕ್ಷಿದಾರರಾಗಿ ಸದರಿಯವರು ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-5 ಮತ್ತು ನಿಡಿ-130ಕ್ಕೆ ಸದರಿ ಮೌಲಾಸಾಬ ಮತ್ತು ಮಾಲಂಬೀ ರವರು ಸಹಿ ಮಾಡಿರುವುದಿಲ್ಲ ಮತ್ತು ಸದರಿಯವರ ಸಹಿಗಳನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯದ ಪ್ರಮಾಣ ಪತ್ರದ ಪ್ಯಾರಾ ನಂ.22ರಲ್ಲಿ ಹಣದ ಅವಶ್ಯಕತೆಗಾಗಿ ಸದರಿ ಮೌಲಾಸಾಬ ರವರು ದಾವಾ ಸ್ವತ್ತುನ್ನು ಮಾರಾಟ ಮಾಡಿದ್ದಾರೆ ಎಂದು ಸುಳ್ಳಾಗಿ ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. (ಈ ಸಮಯದಲ್ಲಿ ಮಾನ್ಯ ಪ್ರತಿವಾದಿ ನಂ.8 ಮತ್ತು 9ನೇ ಪರ ವಕೀಲರು ಸದರಿ ಪ್ರಶ್ನೇಯು ಪುನಾವರ್ತತೆ ಪ್ರಶ್ನೆಯಾಗಿದ್ದು ಅದನ್ನು ಕಡತಕ್ಕೆ ತೆಗೆದುಕೊಳ್ಳಲು ಆಕ್ಷಪಣೆ ವ್ಯಕ್ತಪಡಿಸಿರುತ್ತಾರೆ. ಸದರಿ ಪ್ರಶ್ನೇ ಗುಣಗ್ರಹಣಕ್ಕೆ ಒಳಪಟ್ಟು ತೆಗೆದುಕೊಳ್ಳಲಾಯಿತು.) ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರದೇ ಇದ್ದರೂ ಸಹ ಕ್ರಯ ಪತ್ರವನ್ನು ಸೃಷ್ಠಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-5 ಮತ್ತು ನಿಡಿ-130 ದಾವಾ ಸ್ವತ್ತಿನ ನಿಜ ಮಾಲಿಕರು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ.

ಓ.ಎಸ್. ನಂ. 11/2021
ಡಿಡಬ್ಲೂ 3

<u>ಪಾಟೀ ಸವಾಲು ಃ- ಶ್ರೀ ಎಸ್.ಐ.ಹೆಚ್. ವಕೀಲರಿಂದ 1 ರಿಂದ 5ನೇ ಪ್ರತಿವಾದಿ ಪರ ಃ-</u>
ನಾನು ದಾವಾ ಸ್ವತ್ತಿನ ಪ್ರಸ್ತುತ ಸಾಲಿನ ಪಹಣಿಯನ್ನು ಹಾಜರು ಮಾಡಿರುವುದಿಲ್ಲ, ಆದರೆ ನನ್ನ ಬಳಿ ಇದೆ. ಸದರಿ ಪಹಣಿಯಲ್ಲಿ ದಾವಾ ಸ್ವತ್ತಿನಲ್ಲಿ ಕಬ್ಬಿನ ಬೆಳೆ ಇದೆ ಎಂದು ನಮೂದು ಇಲ್ಲ ಎಂದರೆ ಸಾಕ್ಷಿಯು ನಾನು ಪರೀಶೀಲನೆ ಮಾಡಿಲ್ಲ ಎಂದು ನುಡಿಯುತ್ತಾರೆ. 1 ರಿಂದ 5ನೇ ಪ್ರತಿವಾದಿಯರು ದಾವಾ ಸ್ವತ್ತಿನ ಸ್ವಾಧಿನಲ್ಲಿ ಇದ್ದಾರೆ ಸರಿ ಅಲ್ಲ.
**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರಿ ಹಿರಿಯ ಸಿವಿಲ್ ನ್ಯಾಯಾಧೀಶರು,
ಆಳಂದ.